ಭಾರತೀಯ ಜನತಾ ಪಾರ್ಟಿ

11, ಅಶೋಕ ರಸ್ತೆ, ನವದೆಹಲಿ - 110001

**Phone-011-23005700, Fax-011-23005787**

ಭಾಜಪ ರಾಷ್ಟ್ರೀಯ ವಕ್ತಾರ ಮತ್ತು ಸಂಸದ ಶ್ರೀ ಪ್ರಕಾಶ್ ಜಾವ್ಡೆಕರ್ ಅವರು

ಜನವರಿ 17,2013ರಂದು ನೀಡಿದ ಪತ್ರಿಕಾ ಪ್ರಕಟಣೆ

ದೇಶದಲ್ಲಿ ಜನಸಾಮಾನ್ಯರು ನಿರಂತರ ಬೆಲೆ ಹೆಚ್ಚಳದ ಒತ್ತಡದಿಂದ ತತ್ತರಿಸಿದ್ದಾರೆ. ಹಣದುಬ್ಬರವನ್ನು ನಿಯಂತ್ರಣಕ್ಕೆ ತರುವ ಮೂಲಕ ಜನರ ಬವಣೆ ನೀಗಿಸುವ ಯತ್ನವನ್ನು ಸರ್ಕಾರ ಮಾಡಬೇಕಿದೆ. ಆದರೆ ಸರ್ಕಾರ ರೈಲು ಮತ್ತು ತೈಲ ಬೆಲೆಗಳನ್ನು ಹೆಚ್ಚಿಸುವ ಮೂಲಕ ಮತ್ತಷ್ಟು ಹೊರೆಯನ್ನು ಜನರ ಮೇಲೆ ಹೇರುವ ಕೆಲಸದಲ್ಲಿ ತೊಡಗಿದೆ. **ನಿಯಮಿತವಾಗಿ ಬೆಲೆ ನಿಗದಿ ಪಡಿಸುವ ಅನುಮತಿಯನ್ನು ತೈಲ ಉತ್ಪಾದನಾ ಕಂಪನಿಗಳಿಗೆ ನೀಡುವ ನೆಪದಲ್ಲಿ ಸರ್ಕಾರ ಡೀಸಲ್ ಬೆಲೆಗಳ ಹೆಚ್ಚಳಕ್ಕೆ ಅವಕಾಶ ಕಲ್ಪಿಸಿಕೊಟ್ಟಿರುವುದನ್ನು ಭಾಜಪ ಖಂಡಿಸುತ್ತದೆ.** ಸರ್ಕಾರ ತನ್ನ ಜವಾಬ್ದಾರಿಯಿಂದ ವಿಮುಖರಾದ ಉದಾಹರಣೆಯಿದಾಗಿದೆ. ಇನ್ನು ಕೆಲವೇ ದಿವಸಗಳಲ್ಲಿ ಡೀಸಲ್ ಬೆಲೆಗಳನ್ನು ಒಂದು ಲೀಟರಿಗೆ 10ರೂಪಾಯಿಗಳಷ್ಟು ಹೆಚ್ಚಿಸುವ ಯೋಜನೆ ಹಾಕಿಕೊಂಡಿರುವ ಕ್ರಮವನ್ನು ಭಾಜಪ ದೂಷಿಸಿದೆ.

ಯುಪಿಎ ಪ್ರಣಾಳಿಕೆಯಲ್ಲಿ ಮಾತು ನೀಡಿದಂತೆ ಹಾಗೂ ರಾಷ್ಟ್ರಪತಿಗಳು ತಮ್ಮ ಭಾಷಣದಲ್ಲಿ ತಿಳಿಸಿದಂತೆ, ಸರ್ಕಾರ ಈವರೆಗೂ ಹೈಡ್ರೋಕಾರ್ಬನ್ ಬೆಲೆ ನೀತಿಯನ್ನು ಪ್ರಕಟಿಸಿಲ್ಲ. ನೀತಿ ಹಾಗೂ ನಿರ್ಣಯಗಳಲ್ಲಿ ದೃಢ ಸಂಕಲ್ಪ ಕಾಣೆಯಾಗಿದೆ. ಪೆಟ್ರೋಲಿಯಂ ಸಚಿವರನ್ನು ನಾಲ್ಕು ಬಾರಿ ಬದಲಾಯಿಸಲಾಗಿದೆ ಹಾಗೂ ಬೆಲೆ ನಿಗದಿ ನೀತಿಯನ್ನು 15 ಬಾರಿ ಮಾರ್ಪಡಿಸಲಾಗಿದೆ. ಈ ರೀತಿಯ ಬೇಜವಾಬ್ದಾರಿಯ ವರ್ತನೆಯಿಂದ ದುರಸ್ತಿಗೆ ಬಾರದ ನಷ್ಟವನ್ನು ನಮ್ಮ ಅರ್ಥವ್ಯವಸ್ಥೆ ಅನುಭವಿಸುತ್ತಿದೆ.

**ಬೇರೆ ವಲಯಗಳ ಮೇಲೂ ಡೀಸಲ್ ಬೆಲೆ ಹೆಚ್ಚಳದ ಬಿಸಿ ತಾಗುವುದರಿಂದ ಹಲವಾರು ಅಗತ್ಯ ವಸ್ತುಗಳ ಬೆಲೆ ಹೆಚ್ಚಲಿದೆ. ಪ್ರಯಾಣಿಕರ ಹಾಗೂ ಸರಕು ಸಾಗಿಸುವ ವೆಚ್ಚ ಉಲ್ಬಣವಾಗಲಿದೆ. ನೀರಾವರಿ, ಟ್ರ್ಯಾಕ್ಟರ್ ಹಾಗೂ ಕೃಷಿಗೆ ಉಪಯುಕ್ತ ಅನ್ಯ ಸಾಮಗ್ರಿಗಳ ಬೆಲೆಯೂ ಸಹ ಹೆಚ್ಚಲಿದೆ.**

ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ಕುರಿತಂತೆ ಭಾರತ ಗರಿಷ್ಠ ತೆರಿಗೆ ನೀತಿಯನ್ನು ಅನುಸರಿಸುತ್ತಿದೆ. ಈ ವಿತ್ತೀಯ ವರ್ಷದಲ್ಲಿ ಸರ್ಕಾರ ಈ ವಲಯದಿಂದ ಎರಡು ಲಕ್ಷ ಕೋಟಿ ರೂಪಾಯಿ ವರೆಗೂ ತೆರಿಗೆ ಸಂಗ್ರಹಿಸಲಿದೆ. ನಿರೀಕ್ಷೆಗೂ ಕಮ್ಮಿ ಸಂಗ್ರಹದ ಸಂಕೇತವೂ ಸಂದೇಹದಿಂದ ಕೂಡಿದ್ದು ಆ ಅಂಕಿ ಆಂಶವು ಕೇವಲ ಊಹೆಯನ್ನು ಅವಲಂಬಿಸಿದೆ. **ತೈಲ ಉತ್ಪಾದನಾ ಕಂಪನಿಗಳ ಅಸಾಮರ್ಥ್ಯದಿಂದ ಗ್ರಾಹಕರು ಆಂತರರಾಷ್ಟ್ರೀಯ ಬೆಲೆಗಳನ್ನು ಮತ್ತು ಅಗಾಧ ಪ್ರಮಾಣದ ತೆರಿಗೆಗಳನ್ನು ನೀಡಬೇಕು ಎಂಬ ಸರ್ಕಾರದ ಅಭಿಮತ ಸಾಧುವಲ್ಲ.**

**ವಿನಾಯತಿ ದರದ ಎಲ್‌ಪಿಜಿ ಗ್ಯಾಸ್ ಸಿಲೆಂಡರ್ ಮಿತಿಯನ್ನು 6 ರಿಂದ 9ಕ್ಕೆ ಏರಿಸಿರುವ ನಿರ್ಣಯವೂ ಕೇವಲ ಕಣ್ಣೊರೆಸುವ ತಂತ್ರವಾಗಿದೆ**. ಕಳೆದ 60 ವರ್ಷಗಳಿಂದ ಗ್ರಾಹಕರು ಗೃಹಬಳಕೆ ಉದ್ದೇಶಕ್ಕಾಗಿ ಮಿತಿರಹಿತ ಎಲ್‌ಪಿಜಿ ಸಿಲೆಂಡರ್ ಪಡೆಯುತ್ತಿದ್ದರು. ತನ್ನ ಒಂದು ಕೆಟ್ಟ ನಿರ್ಣಯದಿಂದ ಸರ್ಕಾರ ರಿಯಾಯಿತಿ ದರದ ಸಿಲೆಂಡರ್ ವಿತರಣೆಯನ್ನು ವರ್ಷಕ್ಕೆ ಆರರಂತೆ ಮಿತಿಗೊಳಿಸಿತು. ಇದೊಂದು ಮುರ್ಖತನದ ನಿರ್ಣಯವಾದ್ದರಿಂದ ಮಿತಿಯನ್ನು ಮೂರರಷ್ಟು ಹೆಚ್ಚಿಸಿದೆ, ಆದರೇ ಇದೂ ಸಹ ಅವಿವೇಕದಿಂದ ಕೂಡಿದ ನಿರ್ಣಯವಾಗಿದೆ. ಸರ್ಕಾರ ತನ್ನ ಈ ನಿರ್ಣಯವನ್ನು ವಾಪಸ್ ಪಡೆದು ಈ ಹಿಂದೆ ಇದ್ದಂತೆ ಮಿತಿ ರಹಿತ ಎಲ್‌ಪಿಜಿ ಸಿಲೆಂಡರ್ ವಿತರಣೆ ವ್ಯವಸ್ಥೆಯನ್ನು ಮತ್ತೊಮ್ಮೆ ಜಾರಿಗೆ ತರಬೇಕು.

(ಓ.ಪಿ.ಕ್ಹೊಲಿ)

ಮುಖ್ಯ ಕಚೇರಿ ಪ್ರಭಾರಿ